ಎಂದು ಹೇಳಿಕೊಂಡ ಕಣ್ಣೀರಿನ ಮೊರೆಗೆ ಕರಗಿ ನಿಬಂಧನೆಯ ಮೇರೆಗೆ ಕೆಲಸದಲ್ಲಿ ಇರಿಸಿಕೊಂಡಿದ್ದಾಗಿತ್ತು. ಕೆಲಸಕ್ಕೆ ಹೋಗುವ ದಿನಗಳೇ ಕಡಿಮೆಯಾದಾಗ ಸಂಬಳವೂ ಕಡಿಮೆಯೆ. ಆ ಹಣ ವೆಂಕಟೇಶನ ತಾಯಿಗೆ ಹೋಗುವ ವ್ಯವಸ್ಥೆ. ಹೆಂಡತಿಯೂ ಎಲ್ಲೋ ಪಾರ್ಟ್‌ಟೈಮ್ ಕೆಲಸಕ್ಕೆ ಹೋಗತೊಡಗಿದ್ದು... ಶಶಾಂಕ್ ಮತ್ತು ಚಿರಾಗ್‌ರಿಗೆ ಅಪ್ಪ ಎನ್ನುವವರು ಹೇಗಿರಬಾರದು ಎಂದು ಪ್ರತ್ಯಕ್ಷವಾಗಿ ತಂದೆಯಿಂದ ಪಾಠ ಕಲಿಯುವಂತಾಗಿತ್ತು.

ಅಂತಹ ಅಪ್ಪನಿಗೆ ಇಂತಹ ಮಗನೆ... ಎಂದು ಸಂಬಂಧಿಕರ ಸುತ್ತಿನಲ್ಲಿ ಬಂದುಹೋಗುವ ನುಡಿ. ಕೆಲಸಕ್ಕೆ ಹೋದರೆ ಹೋದ... ಇಲ್ಲದಿದ್ದರೆ ಇಲ್ಲ... ಶಾಸ್ತ್ರಿಗಳ ಹಿತ ನುಡಿಗಳು, ಕಟುನುಡಿಗಳು ಯಾವುದೂ ಪ್ರಯೋಜನಕ್ಕೆ ಬಾರದೆ ಶಾಸ್ತ್ರಿಗಳು ಅದೇ ಕೊರಗಿನಲ್ಲಿ ಕಣ್ಮುಚ್ಚಿಕೊಂಡಿದ್ದಾಗಿತ್ತು. ಹೇಗಾದರೂ ಚಟ ಬಿಡಬೇಕೆಂಬ ವೆಂಕಟೇಶನ ನಿರ್ಧಾರ ದಿನ ಮಾತ್ರದಲ್ಲೇ ಮಾಯವಾಗಿಬಿಡುತ್ತಿತ್ತು. ಅಮ್ಮನ ಬಳಿ ಹಣಕ್ಕೆ ಗೋಗರೆಯುತ್ತಾ, 'ಬಸ್ಸಿಗೂ ಕಾಸಿಲ್ಲ... ನೀನು ಹಣ ಕೊಟ್ಟರೆ ಆಫೀಸಿಗೆ ಹೋಗೋದು,' ಎಂದು ಇದ್ದದ್ದು ಇಲ್ಲದ್ದು ಏನೇನೋ ಕಥೆ ಹೇಳುತ್ತ ಅಮ್ಮ ಎಣಿಸಿಕೊಟ್ಟ ಹಣವನ್ನು ಮತ್ತೆ ಕುಡಿತಕ್ಕೆ ಹಾಕಿ, 'ನೀವೇ ಅವರನ್ನು ಕೆಡಿಸುತ್ತಿದ್ದೀರಿ' ಎಂಬ ಸೊಸೆಯ ಆಕ್ಷೇಪಣೆಗೆ ಗುರಿಯಾಗಿ, ಇದು ಸರಿಯಾಗುವಂತಹುದಲ್ಲ ಎಂಬ ತೀರ್ಮಾನಕ್ಕೆ ಬಂದ ಸವಿತ ತವರಿಗೆ ಹೋಗಿ ಹಾಸ್ಟೆಲ್ ಒಂದರಲ್ಲಿ ವಾರ್ಡನ್ ಆಗಿ ಮಕ್ಕಳಿಗೆ ಅಷ್ಟಿಷ್ಟು ಹಣ ಕಳುಹಿಸುವಂತಾಗಿದ್ದು. ಆದರೆ ಮಕ್ಕಳು ಮಾತ್ರ ಇಷ್ಟೆಲ್ಲ ಗೋಜಲುಗಳ ನಡುವೆಯೂ ಮನೆಯ ಕಷ್ಟವನ್ನು ಅರ್ಥ ಮಾಡಿಕೊಂಡು ಓದಿನಲ್ಲೂ ಸೈ ಎನಿಸಿಕೊಂಡು ಅಜ್ಜಿಗೂ ಅಮ್ಮನಿಗೂ ಭವಿಷ್ಯದ ಭರವಸೆಯಾಗಿ ಬೆಳೆಯುತ್ತಿದ್ದಾರಲ್ಲ.

ಅಂತಹ ಸಂಸ್ಕಾರವಂತರ ಮನೆಯಲ್ಲಿ ಬೆಳೆದ ವೆಂಕಟೇಶ್‌ನ ಸ್ಥಿತಿಗೆ ಕಾರಣವೇನು... ಸಹವಾಸ ದೋಷವೆಂದು ತಳ್ಳಿಹಾಕಲಾದೀತೆ... ಮೂದಲಿಸಿದವರು ಹಳ್ಳಕ್ಕೆ ತಳ್ಳಿ ತಾವು ತಮಾಷೆ ನೋಡಿದ್ದಷ್ಟೆ. ಸ್ವತಃ ಅವರು ಯಾರೂ ಕುಡಿತದ ಚಟಕ್ಕೆ ಬಿದ್ದಿರಲಿಲ್ಲವಲ್ಲ. ಹಾಗಿರುವಾಗ ಗೆಳೆಯರ ಅಪಹಾಸ್ಯವನ್ನು ಧಿಕ್ಕರಿಸಿ 'ನಾನಿರುವುದೇ ಹೀಗೆ' ಎಂದು ತೋರಿಸುವುದು ಭೇಷ್ ಎನ್ನುವ ನಡೆಯಾಗುತ್ತಿರಲಿಲ್ಲವೆ. ಇತ್ತೀಚೆಗೆ ವೆಂಕಟೇಶ್‌ಗೆ ಇಲ್ಲದ ಕಾಯಿಲೆಗಳೂ ಸೇರಿಕೊಂಡಿವೆಯಂತೆ... ಆ ಪಾಟಿ ಕುಡಿತದ ಪರಿಣಾಮ ಮತ್ತೇನಾಗುತ್ತದೆ ಎಂಬ ಅವರಿವರ ಮಾತುಗಳೂ ಸೇರಿಕೊಳ್ಳುತ್ತವೆ. ಏನೋ ಇತ್ತೀಚೆಗೆ ಬುದ್ಧಿ ಬಂದ ಹಾಗಿದೆ. ತುಂಬಾ ಮೆತ್ತಗಾಗಿದ್ದಾನೆ ಎಂದು ತಮ್ಮ ಹೇಳಿದಾಗ ಕೊಂಚ ನಿರಾಳವೆನಿಸಿತ್ತಾದರೂ ಇದೀಗ ಕಾಲ ಮೀರಿಬಿಟ್ಟಿದೆಯಲ್ಲ.

ಯಾಕೋ ಬಾಲನ್ ನನ್ನ ನೆನಪುಗಳನ್ನು ಎತ್ತಲೋ ತೆಗೆದುಕೊಂಡು ಹೋಗಿದ್ದ.

ಭಾನುವಾರ ಒಂದು ದಿನ ರಜೆ ಮಾಡುತ್ತಿದ್ದ ಬಾಲನ್, ಮತ್ತೆ ಬರುವುದು ಒಂದು ದಿನ ತಪ್ಪಿಸಿದರೂ ಅನೇಕರ ಪ್ರಶ್ನೋತ್ತರಗಳನ್ನು ಎದುರಿಸಬೇಕಾಗುತ್ತಿತ್ತು. ಇಲ್ಲಿರುವ ಪ್ರತಿ ಮನೆಯವರೂ, ಪ್ರತಿ ದಿನವೂ ಅವನ ಹತ್ತಿರ ತರಕಾರಿ ಖರೀದಿಸಿಯೇ ಬಿಡುತ್ತಿದ್ದರು ಎಂದಲ್ಲವಾದರೂ ಅವನ ಧ್ವನಿ ಕೇಳಬೇಕು. ಹೊರಗೊಮ್ಮೆ ಇಣುಕಿ ನೋಡಬೇಕು. ಶೀತ, ಜ್ವರ ಎಂದು ಅಪರೂಪಕ್ಕೊಮ್ಮೆ ಒಂದೆರಡು ದಿನಗಳ ಮಟ್ಟಿಗೆ ತಪ್ಪಿಸುತ್ತಿದ್ದುದುಂಟು. ಒಮ್ಮೆ ನಾಲ್ಕೈದು ದಿನಗಳಾದರೂ ಬರಲೇ ಇಲ್ಲ ಆತ. ಇಂದು ಬಂದೇ ಬಂದಾನು ಎಂದು ಕಾದಿದ್ದೇ ಬಂತು. ತುರ್ತು ಬೇಕಾದರೆ ಎಂದು ಮನೆಯಲ್ಲಿಟ್ಟಿದ್ದ ಆಲೂಗೆಡ್ಡೆ, ಕಾಳುಗಳೆಲ್ಲವನ್ನೂ ಖರ್ಚು ಮಾಡಿಯಾಯಿತು. ಇವತ್ತು ಬೇರೆಯವರ ಹತ್ತಿರ ತರಕಾರಿ ತೆಗೆದುಕೊಳ್ಳಲೇಬೇಕು